

## ಕಾಡಲ್ಲಿ ಕಂಡ ಹಸುರಾವು

ತೀರ್ಥಹಳ್ಳಿ ಹತ್ತಿರದ ಕಾಡೊಂದರಲ್ಲಿ ಸುತ್ತಾಡುತ್ತಿದ್ದಾಗ ಹಸುರು ಹಾವೊಂದು ಕಣ್ಣಿಗೆ ಬಿತ್ತು. ಮಿಕ್ಕೆಲ್ಲ ಹಾವುಗಳಿಗಿಂತ ಇದು ಕೊಂಚ ವಿಭಿನ್ನವಾಗಿ ನನ್ನನ್ನು ಆಕರ್ಷಿಸಿತು. ವಿಷಕಾರಿಯಲ್ಲದ ಈ ಹಾವನ್ನು ಇಂಗ್ಲಿಷ್‌ನಲ್ಲಿ ಓಫಿಯೋಡ್ರಿಸ್ ವರ್ನಾಲಿಸ್ ಎಂತಲೂ ಕರೆಯುತ್ತಾರೆ. ಕೊಲುಬ್ರಿಡೆ ಪ್ರಭೇದಕ್ಕೆ ಸೇರಿದ ಇದಕ್ಕೆ ಹುಲ್ಲು ಹಾವು ಎಂಬ ಹೆಸರೂ ಇದೆ. ಸಾಮಾನ್ಯವಾಗಿ ಇದು ಹಸುರಿರುವ ಗಿಡದ ಮೇಲೆ ಓಡಾಡುತ್ತದೆ. ಅಲ್ಲಿ ಸಿಗುವ ಸಣ್ಣಪುಟ್ಟ ಹುಳಗಳನ್ನು ತಿಂದು ಜೀವಿಸುತ್ತದೆ. ಆಕ್ರಮಣಕಾರಿಯಲ್ಲದ ಈ ಹಾವು, ಕಚ್ಚುವುದು ವಿರಳಾತಿ ವಿರಳ. ಬೆದರಿ ಸ್ಥಳದಿಂದ ಕಾಲ್ಕೀಳುವ ಗುಣ ಹೊಂದಿದೆ.

–ಅಂಚೆ ಸುಬ್ರಹ್ಮಣ್ಯ, ಕೊಪ್ಪ








## ಮರೆಯಲಿ ಹ್ಯಾಂಗ ಬಿಜಲಿ



ಬಿಜಲಿ ಎಂದೇ ಉತ್ತರ ಕರ್ನಾಟಕದ ಕಡೆ ಕರೆಯಲ್ಪಡುವ ಪೆಟ್ರೊಮ್ಯಾಕ್ಸ್ 70–80ರ ದಶಕದಲ್ಲಿ ಮನೆಮನೆಗಳ, ಹಬ್ಬ ಹರಿದಿನಗಳ ಹಾಗೂ ಮೆರವಣಿಗೆಗಳ ಅವಿಭಾಜ್ಯ ಅಂಗವಾಗಿತ್ತು. ಪ್ರಖರವಾದ ಬೆಳಕನ್ನು ಸೂಸುತ್ತಿದ್ದ ಪೆಟ್ರೊಮ್ಯಾಕ್ಸ್ ಈಗ ಕೆಲವೆಡೆ ಅಟ್ಟ ಸೇರಿದರೆ, ಇನ್ನೂ ಕೆಲವೆಡೆ ಮ್ಯೂಸಿಯಂ ಸೇರಿದೆ. ಸೀಮೆಎಣ್ಣೆ ಗ್ಯಾಸ್‌ಲೈಟ್‌ನಿಂದ ಬೆಳಗುತ್ತಿದ್ದ ಇದಕ್ಕೆ ಗಾಳಿ ತುಂಬಿ ಬೆಳಕಿನ ಪ್ರಮಾಣ ಹೆಚ್ಚು ಕಡಿಮೆ ಮಾಡಬಹುದಿತ್ತು. ಬೆಳಕು ನೀಡಲು ಲಾಟೀನಿಗೆ ಬೇಕಿದ್ದಂತಹ ಬತ್ತಿ ಇದಕ್ಕೆ ಅಗತ್ಯವಿಲ್ಲ. ಅದರ ಬದಲಿಗೆ ರೇಷ್ಮೆ ದಾರದಿಂದ ತಯಾರಿಸಿದ ಚಿಕ್ಕ ದುಂಡನೆಯ ಬಲೆಯಾಕಾರದ 'ಮೆಂಟಲ್' ಅನ್ನು ಬಳಸಲಾಗುತ್ತಿತ್ತು. ಇದರಿಂದಲೇ ಬೆಳಕು ಮೂಡುತ್ತಿತ್ತು. ಉರಿಸಿದಾಗ ಬೂದಿಯಾಗುವ ಬಲೆಯಿಂದ ಬೆಳಕು ಹರಿಯುತ್ತಿದ್ದದ್ದು ಆಶ್ಚರ್ಯ ಮೂಡಿಸುತ್ತಿತ್ತು(ಬಲ್ಬಿನ್ ಟಂಗಸ್ಟನ್ ಹಾಗೇ). ಇದರ ಕೆಳಗಿನ ಟ್ಯಾಂಕ್‌ನಲ್ಲಿ ಸೀಮೆಎಣ್ಣೆ ಹಾಕಿ, ಪಂಪ್ ಮಾಡಿ ಒತ್ತಡ ಹೆಚ್ಚಿಸಿ ಬೆಂಕಿ ಹೊತ್ತಿಸಿದರೆ ಪ್ರಖರವಾಗಿ ಬೆಳಗುತ್ತಿತ್ತು.

ಪೆಟ್ರೊಮ್ಯಾಕ್ಸ್ ಅನ್ನು ಕೆಲವೆಡೆ ಗ್ಯಾಸ್‌ಲೈಟ್ ಅಂತಲೂ ಕರೆಯಲಾಗುತ್ತದೆ. ಸೀಮೆಎಣ್ಣೆ ಹರಿಯುವ ಜಾಗದಲ್ಲಿ ಮಸಿ ಕಟ್ಟಿಕೊಂಡಾಗ ಅದನ್ನು ಸ್ಟವ್ ಪಿನ್ ಮೂಲಕ ಕ್ಲೀನ್ ಮಾಡಲಾಗುತ್ತಿತ್ತು. ಇಂತಹ ಪೆಟ್ರೊಮ್ಯಾಕ್ಸ್ ಅನ್ನು ಮೆರವಣಿಗೆಗಳಲ್ಲಿ ತಲೆಯ ಮೇಲೆ ಹೊತ್ತು ನಡೆಯುವುದಕ್ಕೆಂದೇ ಒಂದಷ್ಟು ಮಂದಿ ಕೆಲಸಗಾರರು ಇರುತ್ತಿದ್ದರು.

–ಶರದ ಕುಲಕರ್ಣಿ, ಬೀದರ್